ಬರಗಾಲ ಪರಿಹಾರಕ್ಕಾಗಿ ಕೇಂದ್ರದಿಂದ ದೊರೆತ ಹಣ

33-ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಕೇಂದ್ರ ಸರಕಾರದಿಂದ ರಾಜ್ಯಕ್ಕೆ ಬರಗಾಲ ಪರಿಹಾರ ಕಾರ್ಯಕ್ಕಾಗಿ ದೊರೆಯುವ ನೆರವು ಎಷ್ಟು?

ಆ) ಬರಗಾಲ ಪರಿಹಾರ ಕಾರ್ಯಕ್ರಮಗಳಲ್ಲಿ ದುರುಪಯೋಗ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಆರ್.ಎಲ್.ಜಾಲಪ್ಪ (ಕಂದಾಯ ಸಚಿವರು):

ಅ) 1995-96ನೇ ಸಾಲಿಗೆ 10ನೇ ಹಣಕಾಸು ಆಯೋಗದ ಶಿಫಾರಸಿನಂತೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಂತಿಗೆ ಶೇಕಡಾ 75: 25ರ ಅನುಪಾತದಲ್ಲಿ ರಾಜ್ಯ 'ಪ್ರಕೃತಿ ವಿಕೋಪ ಪರಿಹಾರ ನಿಧಿ'ಗೆ ರೂ. 39.49 ಕೋಟಿಗಳೆಂದು ನಿಗಧಿ ಪಡಿಸಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ರಸ್ತೆ ಸಾರಿಗೆ ಸಂಸ್ಥೆಗೆ ಅವಶ್ಯಕವಿರುವ ಬಸ್ಸುಗಳು

35- ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಅವಶ್ಯವಿರುವ ಬಸ್ಸುಗಳ ಸಂಖ್ಯೆ ಎಷ್ಟು.

ಆ) ಈ ಅವಶ್ಯಕತೆಯನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಮಂಡ್ಯ ಜಿಲ್ಲೆಯನ್ನು ರಾಷ್ಟ್ರೀಕರಣ ಮಾಡಲಾಗುವುದೇ? ಹಾಗಿದ್ದಲ್ಲಿ ಎಂದಿನಿಂದ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು):

ಅ) 1995-96ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಅನುಸೂಚಿಗಳನ್ನು ಹೆಚ್ಚಿಸಲು 540 ಹೊಸ ಬಸ್ಸುಗಳು ಹಾಗೂ ಹಳೇ ಬಸ್ಸುಗಳು ಬೇಕಾಗಿರುತ್ತವೆ. ಒಟ್ಟು 1550 ಬಸ್ಸುಗಳ ಅವಶ್ಯಕತೆ ಇದೆ.

ಆ) ವಾಣಿಜ್ಯ ಬ್ಯಾಂಕುಗಳಿಂದ, ಐ.ಡಿ.ಬಿ.ಐ., ಜೀವ ವಿಮಾ ನಿಗಮದಿಂದ ಸಾಲ ಪಡೆದು ಮತ್ತು ಸಂಸ್ಥೆಯ ಸಂಪನ್ಮೂಲಗಳನ್ನು ಬಳಸಿಕೊಂಡು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 1995-96ರ ಸಾಲಿನಲ್ಲಿ 1550 ಹೊಸ ಬಸ್ಸುಗಳನ್ನು ಖರೀದಿಸಲು ಈಗಾಗಲೇ ಕ್ರಮ ತೆಗೆದುಕೊಂಡಿದೆ.

ಇ) ಸದ್ಯಕ್ಕೆ ಅದರ ಪ್ರಸ್ತಾಪನೆ ಇರುವುದಿಲ್ಲ.